# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 537 |
| 2 | ಸದಸ್ಯರ ಹೆಸರು | : | ಶ್ರೀ ವಿನಯ್ ಕಾರ್ತಿಕ್ ಪ್ರಕಾಶ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಕಸ ಸಂಗ್ರಹಕ್ಕೆ ಬರುವ ವಾಹನಗಳಿಗೆ ಟ್ರ್ಯಾಕಿಂಗ್ ವ್ಯವಸ್ಥೆ ಅಳವಡಿಸುವುದು, ಕಸ ಸಂಗ್ರಹಕ್ಕೆ ಬಾಸ್ಕೆಟ್ ಗಳನ್ನು ವಿತರಿಸುವುದು ಹಾಗೂ ಪೌರ ಕಾರ್ಮಿಕರು ತಪ್ಪದೇ ಕಸವನ್ನು ಸಂಗ್ರಹಿಸಿ ಒಯ್ಯುವ ವ್ಯವಸ್ಥೆ ನಿರ್ಮಾಣಗೊಳ್ಳಬೇಕು ಎಂಬ ಒತ್ತಾಯ ನಾಗರಿಕರಿಂದ ಕೇಳಿಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಘನತ್ಯಾಜ್ಯ ವಾಹನಗಳಿಗೆ RFID (Radio Frequency Indentification) ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಹಾಗೂ ವಾಹನಗಳನ್ನು ಮೇಲ್ವಿಚಾರಣೆ ಮಾಡಲು ಹೊಸದಾಗಿ Sankalpa APP ಅನ್ನು ಸಿದ್ಧಪಡಿಸಿದ್ದು, ಪ್ರಯೋಗದ ಹಂತದಲ್ಲಿರುತ್ತದೆ. ತ್ಯಾಜ್ಯ ಸಂಗ್ರಹಣೆ ಹಾಗೂ ಸಾಗಾಣಿಕೆ ಕಾರ್ಯ ನಿರ್ವಹಿಸುತ್ತಿರುವ ಕಾಂಪ್ಯಾಕ್ಟರ್ ವಾಹನಗಳಿಗೆ ಜಿ.ಪಿ.ಎಸ್ ಅಳವಡಿಸಲು ಈಗಾಗಲೇ ಕ್ರಮ ವಹಿಸಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ವ್ಯವಸ್ಥೆ ಕಲ್ಪಿಸಲು ಇದುವರೆಗೆ ಸರ್ಕಾರ ಏನೆಲ್ಲಾ ಕ್ರಮಗಳನ್ನು ತೆಗೆದುಕೊಂಡಿದೆ; | ಪಾಲಿಕೆ ವತಿಯಿಂದ ಮನೆಗಳಿಗೆ ಕಸ ಸಂಗ್ರಹಿಸಿ ನೀಡಲು ಯಾವುದೇ ಬಾಸ್ಕೆಟ್‌ಗಳನ್ನು ವಿತರಿಸುವುದಿಲ್ಲ. ಬದಲಾಗಿ ಮನೆ-ಮನೆಯಿಂದ ತ್ಯಾಜ್ಯವನ್ನು ಆಟೋಟಿಪ್ಪರ್ ಗಳ ಮೂಲಕ ಸಂಗ್ರಹಿಸಲಾಗುತ್ತದೆ. ಪೌರಕಾರ್ಮಿಕರು ರಸ್ತೆಗಳಲ್ಲಿ ಗುಡಿಸಿದ ಕಸವನ್ನು ಸಂಗ್ರಹಿಸಿ ಆಟೋಟಿಪ್ಪರ್ ಗಳಿಗೆ ನೀಡಲು ಎಲ್ಲಾ ಪೌರಕಾರ್ಮಿಕರುಗಳಿಗೆ ಜಂಬೋ ಬ್ಯಾಗ್ ಗಳನ್ನು ನೀಡಲಾಗಿರುತ್ತದೆ. |
| ಇ) | ರಸ್ತೆ ಬದಿಯಲ್ಲಿ ಕಸ ಬಿಸಾಡುತ್ತಿದ್ದರೆ, ಅಂಥ ಜಾಗದ ಬಳಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿದರೆ ಎಲ್ಲೆಂದರಲ್ಲಿ ಕಸ ಬಿಸಾಡುವ ಪ್ರವೃತ್ತಿಗೆ ಶಾಶ್ವತವಾಗಿ ಕಡಿವಾಣ ಹಾಕಬಹುದಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು; | ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಕಸ ಬಿಸಾಡುವ ಜಾಗಗಳಾದ ಕಪ್ಪು ಚುಕ್ಕೆ ಪ್ರದೇಶಗಳಲ್ಲಿ ಈಗಾಗಲೇ 180 ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು ಮೇಲ್ವಿಚಾರಣೆ ಮಾಡಲಾಗುತ್ತಿರುತ್ತದೆ. |
| ಈ) | ಸಂಗ್ರಹವಾಗದೇ ಒಂದು ಕಡೆ ಬೀಳುವ ಕಸವು ಬ್ಲಾಕ್ ಸ್ಪಾಟ್‌ಗಳನ್ನು ಸೃಷ್ಟಿಸುವುದರ ಜೊತೆಗೆ ಚರಂಡಿ ಮತ್ತು ರಾಜಕಾಲುವೆಗಳು ಮುಚ್ಚಿ ಹೋಗಲು ಪ್ರಮುಖ ಕಾರಣವಾಗುತ್ತಿದ್ದು, ಜೊತೆಗೆ ನೀರಿನ ಮೂಲಕ ಕಸ ಕೆರೆಗಳಿಗೆ ಸೇರುವ ಮೂಲಕ ಜಲಮಾಲಿನ್ಯ ಸೃಷ್ಟಿ ಮಾಡುತ್ತಿರುವುದನ್ನು ತಡೆಯಲು ಸರ್ಕಾರ ಈ ಕೂಡಲೇ ಅಗತ್ಯ ಕ್ರಮ ವಹಿಸುವುದೇ? | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಸದ ಬ್ಲಾಕ್ ಸ್ಪಾಟ್‌ಗಳನ್ನು ಪ್ರತಿ ದಿವಸ ತೆರವು ಮಾಡಲಾಗುತ್ತಿದೆ. ಚರಂಡಿ ಮತ್ತು ರಾಜಕಾಲುವೆಗಳಲ್ಲಿ ಕಸವು ಬೀಳದ ಹಾಗೆ ಚರಂಡಿಗೆ ಸ್ಲಾಬ್‌ಗಳನ್ನು ಮತ್ತು ರಾಜಕಾಲುವೆಗಳಿಗೆ Grill ಅಳವಡಿಸುವುದರೊಂದಿಗೆ ನಿಯತಕಾಲಿಕವಾಗಿ Desilting ಕಾರ್ಯವನ್ನು ಸಂಬಂಧಪಟ್ಟ ನಗರಪಾಲಿಕೆಯ ಇಂಜಿನಿಯರಿಂಗ್ ವಿಭಾಗದಿಂದ ಕೈಗೊಳ್ಳಲಾಗುತ್ತಿದೆ. |

**ನಅಇ 592 ಎಂಎನ್‌ವೈ 2026 (ಇ)**

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು